**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 3

| | |
|---|---|
| ಸಾಕ್ಷಿದಾರರ ಹೆಸರು | ಅಹಮದ್ ರಾಜಾ ಅಲಿಯಾಸ್ ರಜಾಕ್ |
| ತಂದೆಯ ಹೆಸರು | ಸದಾಕತ್ ಅನ್ಸಾರಿ |
| ವಯಸ್ಸು | 17 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಪೂರನಿದಿ ಗ್ರಾಮ, ತಾಃ ಸದಿಯಾ, ಜಿಃಗಿರಡಿ, ಜಾರ್ಖಂಡ್ ರಾಜ್ಯ |

ದಿನಾಂಕಃ 05-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) 1 ನೇ ಆರೋಪಿ ನನ್ನ ತಾಯಿ. 2 ನೇ ಅರೋಪಿ ನನ್ನ ಚಿಕ್ಕಪ್ಪ. ಮೃತ ಸದಾಕತ್ ಅನ್ಸಾರಿ ನನ್ನ ತಂದೆ. 5 ವರ್ಷಗಳ ಹಿಂದೆ ನನ್ನ ತಂದೆ ಹೆಜಮಾಡಿ ಎಂಬಲ್ಲಿ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ನಾವು ಮೂಲತಃ ಜಾರ್ಖಂಡ ರಾಜ್ಯದವರಾಗಿದ್ದು, ನನ್ನ ತಂದೆ ಕೂಲಿ ಕೆಲಸಕ್ಕಾಗಿ ಹೆಜಮಾಡಿಗೆ ಬಂದಿರುತ್ತಾರೆ. ಹೆಜಮಾಡಿಯಲ್ಲಿರುವ ಕರ್ನಿರೆ ಮಸೀದಿಗೆ ಸಂಬಂಧಪಟ್ಟ ಕಟ್ಟಡದಲ್ಲಿ ನಾವು ಬಾಡಿಗೆಗೆ ವಾಸವಾಗಿದ್ದೆವು. ಆಗ ನಾನು, ಒಬ್ಬ ತಮ್ಮ, ಇಬ್ಬರು ತಂಗಿಯರು, ತಂದೆ ,ತಾಯಿ ಮತ್ತು ಚಿಕ್ಕಪ್ಪನೊಂದಿಗೆ ವಾಸವಾಗಿದ್ದೆವು. ನನ್ನ ತಂದೆ ಮತ್ತು ಚಿಕ್ಕಪ್ಪ ಗಾರೆ ಮತ್ತು ಟೈಲ್ಸ ಕೆಲಸ ಮಾಡುತ್ತಾರೆ. ನನ್ನ ತಾಯಿ ಮತ್ತು ನನ್ನ ಮೃತ ತಂದೆಯ ಸಂಬಂಧ ಚೆನ್ನಾಗಿ ಇತ್ತು. ನನ್ನ ತಂದೆಯನ್ನು ಕೊನೆಯ ಬಾರಿ ಮನೆಯಲ್ಲಿ ನೋಡಿದ್ದೆ. ಆಗ ರಾತ್ರಿಯ ಸುಮಾರು 8 ಗಂಟೆಯ ಸಮಯ. ನಂತರ ನಾನು ಅವರನ್ನು ನೋಡಿಲ್ಲ. ನಂತರ ನಾನು ಅವರನ್ನು ಪೋಸ್ಟಮಾರ್ಟಂ ನಂತರ ಕರೆತಂದಾಗ ನೋಡಿದ್ದೆ. ನನ್ನ ತಂದೆಗೆ ಎಲ್ಲಿ, ಹೇಗೆ ಅಪಘಾತವಾಗಿತ್ತು ಎಂದು ಗೊತ್ತಿಲ್ಲ.

2) ನನ್ನ ತಂದೆಯ ಸಾವಿನ ಬಗ್ಗೆ ಆರೋಪಿತರನ್ನು ಪೊಲೀಸರು ದಸ್ತಗಿರಿ ಮಾಡಿದ್ದ ಬಗ್ಗೆ ಗೊತ್ತು. ಯಾವ ಕಾರಣಕ್ಕೆ ಎಂದು ಆಗ ತಿಳಿದಿರಲಿಲ್ಲ. ಈಗ ಗೊತ್ತಾಗಿದೆ. ನನ್ನನ್ನು ನ್ಯಾಯಾಧೀಶರ ಮುಂದೆ ವಿಚಾರಿಸಿದ್ದರು. ಆಗ ಲಾಕ್ ಡೌನ್ ಇತ್ತು. ವಿಸಿ ಮೂಲಕ ನನ್ನನ್ನು ವಿಚಾರಿಸಿದ್ದರು. ಪೊಲೀಸರು ಹೇಳಿಕೆ ಪಡೆದಿದ್ದ ಬಗ್ಗೆ ನನಗೆ ಗೊತ್ತಿಲ್ಲ. .

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ಸುಮಾರು 4-5 ವರ್ಷಗಳ ಹಿಂದೆ ನನ್ನ ತಂದೆ ನನಗೆ ಓದುವ ವಿಚಾರದಲ್ಲಿ ನನಗೆ ಆಗಾಗ ಬೈದು, ಜೋರು ಮಾಡಿ, ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ ಮತ್ತು ಆ ಸಮಯದಲ್ಲಿ ನನಗೆ ಒಂದು ಮೊಬೈಲ್ ತಂದು ಕೊಟ್ಟಿದ್ದರು. ನಾನು ಯಾವಾಗಲೂ ಮೊಬೈಲ್ ನಲ್ಲಿ ಆಡುತ್ತಿರುತ್ತೇನೆ ಎಂದು ನನ್ನ ತಂದೆ ನನಗೆ ಜೋರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿ: 21-05-2020 ರಂದು ರಾತ್ರಿ 9 ಗಂಟೆಗೆ ನನ್ನ ತಂದೆ ನನಗೆ ಏಕೆ ಓದುವುದಿಲ್ಲ, ಮೊಬೈಲ್ ನೋಡುತ್ತಾ ಇರುತ್ತಿಯಾ ಎಂದು ಬೈದು, ಹೊಡೆಯಲು ಬಂದಾಗ ನನ್ನ ತಾಯಿ ತಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ತಾಯಿ ಮತ್ತು ತಂದೆ ಜಗಳ ಮಾಡಿಕೊಂಡು, ನಂತರ ಸಮಾಧಾನಗೊಂಡರು ಎಂದರೆ ಸರಿಯಲ್ಲ. ರಾತ್ರಿ ಸುಮಾರು 10 ಗಂಟೆಗೆ ನನ್ನ ತಾಯಿ ನನ್ನನ್ನು ಮತ್ತು 2 ನೇ ಆರೋಪಿಯನ್ನು ಎಬ್ಬಿಸಿ, ನನ್ನ ತಂದೆ ತಾಯಿಗೆ ಹೊಡೆಯಲು ಬಂದಾಗ, ಆಕೆ ತಂದೆಯನ್ನು ದೂಡಿದ ಸಮಯ, ತಂದೆಯ ತಲೆ ಗೋಡೆಗೆ ತಾಗಿ, ಬಿದ್ದಿದ್ದರಿಂದ ಅವರು ಮಾತನಾಡುತ್ತಿಲ್ಲ ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ನನ್ನ ತಂದೆ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ರಾತ್ರಿ 12 ಗಂಟೆ ಸುಮಾರಿಗೆ ನನ್ನ ತಾಯಿ ಮತ್ತು ಚಿಕ್ಕಪ್ಪ ಸೇರಿ ನನ್ನ ತಂದೆಯನ್ನು, ತಂದೆಯ ಸ್ಕೂಟರ್ ನಲ್ಲಿ ಮಧ್ಯದಲ್ಲಿ ಕೂರಿಸಿಕೊಂಡು ಎಲ್ಲಿಗೋ ಹೋದರು ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತು ಕಳೆದ ಬಳಿಕ, ತಾಯಿ ಮತ್ತು ಚಿಕ್ಕಪ್ಪ ಮಾತ್ರ ವಾಪಸು ಬಂದಿರುತ್ತಾರೆ ಎಂದರೆ ಸರಿಯಲ್ಲ. ತಂದೆ ವಾಪಾಸು ಬರಲಿಲ್ಲ ಮತ್ತು

ಸ್ಕೂಟರ್ ನ್ನು ತಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸ್ಕೂಟರ್ ನ್ನು ಚಲಾಯಿಸಿಕೊಂಡು ಹೋಗುವಾಗ ಅಪಘಾತವಾಗಿ ಮೃತಪಟ್ಟಿರುತ್ತಾರೆ ಎಂದು ನನ್ನ ತಾಯಿ ತಿಳಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 23-05-2020 ರಂದು ಈಗ ನನಗೆ ಓದಿ ಹೇಳಿದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-5 ಎಂದು ಗುರುತಿಸಿದೆ.

2) ದಿನಾಂಕ 19-06-2020 ರಂದು ಜೆ.ಎಂ.ಎಫ್ ಸಿ ನ್ಯಾಯಾಧೀಶರು ವಿಸಿ ಮೂಲಕ ಈಗ ನನಗೆ ಓದಿ ಹೇಳಿದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-6 ಎಂದು ಗುರುತಿಸಿದೆ.

3) ನನ್ನ ತಂದೆಯ ಸಾವಿಗೆ ಕಾರಣರು ಯಾರೂ ಎಂದು ನನಗೆ ಗೊತ್ತಿದ್ದರೂ ಸಹ ಈಗ ನಾನು ನನ್ನ ತಾಯಿಗೆ ಮತ್ತು ನನ್ನ ಚಿಕ್ಕಪ್ಪನಿಗೆ ಶಿಕ್ಷೆಯಾಗಬಾರದೆಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ನಾನು ಪೊಲೀಸರು ಹೇಳಿ ಕೊಟ್ಟಂತೆ ನಿಪಿ-6 ರ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ